UDAYAVANI – MANIPAL 20-3-2011

# ಕುಗ್ರಾಮದಲ್ಲಿ ಬೆಳಕು ಹರಿಸಿದ ರೋಟರಿ ಸೌರಜ್ಯೋತಿ

ಲಕ್ಷ್ಮಿ ಮಚ್ಚಿನ

**ಬೆಳ್ತಂಗಡಿ:** ಇನ್ನೂ ಕೆಲವು ವರ್ಷಗಳ ಕಾಲ ಬೆಳಕು ಹರಿಯದ ಊರುಗಳಿಗೆ ಸೆಲ್ಕೋ ಸಂಸ್ಥೆ ಹಾಗೂ ರೋಟರಿ ಸಂಸ್ಥೆಯು ಬ್ಯಾಂಕ್‌ಗಳ ಸಹಯೋಗದೊಂದಿಗೆ ಬೆಳಕು ನೀಡಲು ಮುಂದಾಗಿದೆ.

ಬೆಳ್ತಂಗಡಿ ರೋಟರಿ ಕ್ಲಬ್ ಸೆಲ್ಕೋ ಸೋಲಾರ್ ಪ್ರೈ. ಲಿ. ಸಹಭಾಗಿತ್ವದಲ್ಲಿ ಸೌರಜ್ಯೋತಿ ಯೋಜನೆ ಎಂಬ ಯೋಜನೆಯನ್ನು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಜಾರಿಗೆ ತರುತ್ತಿದೆ. 30 ಲಕ್ಷ ರೂ.ಗಳ ಅಪೂರ್ವ ಯೋಜನೆಯಾದ ಇದಕ್ಕೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಹಣಕಾಸಿನ ನೆರವು ನೀಡುತ್ತಿದೆ.

ಬೆಳ್ತಂಗಡಿಯ ಸುತ್ತಮುತ್ತ ವಿದ್ಯುತ್ ಸಂಪರ್ಕ ಇಲ್ಲದ ಅದೆಷ್ಟೋ ಹಳ್ಳಿಗಳಿವೆ. ದೇಶದಲ್ಲಿ 80 ಸಾವಿರ ಹಳ್ಳಿಗಳು ಇನ್ನೂ ಕತ್ತಲ ಪ್ರದೇಶದಲ್ಲಿವೆ. ಇನ್ನೂ ಕಾಡಿನ ಬುಡದಲ್ಲಿ ನಾಡಿನ ಸೌಲಭ್ಯ ಪಡೆಯದ ಸೌಕರ್ಯ ವಂಚಿತ ಹಳ್ಳಿಗಳಿವೆ. ರಸ್ತೆ, ವಿದ್ಯುತ್ ಇವರ ಮೂಲಭೂತ ಅವಶ್ಯಕತೆಯಾಗಿದ್ದು ರೋಟರಿ ಕ್ಲಬ್ ತನ್ನ ಸದಸ್ಯರ ಜತೆ ಸಮಾಲೋಚಿಸಿ ಹಳ್ಳಿಗಾಡಿನ ಜನರಿಗೆ ವಿದ್ಯುತ್ ಸೌಕರ್ಯ ನೀಡಲು ಮುಂದಾಗಿದೆ.

ಅಲ್ಲಿನ ಮಕ್ಕಳ ಶೈಕ್ಷಣಿಕ ಗುಣಮಟ್ಟ ಸುಧಾರಣೆಯಾಗುವುದು. ಲೋಡ್‌ಶೆಡ್ಡಿಂಗ್‌ನ ಸಮಸ್ಯೆ ಇಲ್ಲ, ವಿದ್ಯುತ್ ಬಿಲ್ ಬರುವುದೇ ಇಲ್ಲ, ವಿದ್ಯುತ್ ಸೌಲಭ್ಯ ವಂಚಿತ ಹಳ್ಳಿಗಳಿಗೆ ಸದ್ಯದ ಮಟ್ಟಿಗೆ ವಿದ್ಯುತ್ ಸಂಪರ್ಕ



ದೊರೆಯುವ ಸಾಧ್ಯತೆ ಕ್ಷೀಣ. ಗ್ರಾಮಾಂತರದಲ್ಲಿ ವಿದ್ಯುತ್ ಸಂಪರ್ಕ ಇದ್ದವರೇ ಪವರ್ ಕಟ್‌ನ ತೊಂದರೆ ಅನುಭವಿಸುತ್ತಿದ್ದಾರೆ.

ಹತ್ತು ಹಲವು ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬೆಳ್ತಂಗಡಿ ರೋಟರಿ ಕ್ಲಬ್ ತಾಲೂಕಿನ 150 ಮನೆಗಳಿಗೆ ಸೌರದೀಪ ಅಳವಡಿಸಲು ಸಿದ್ಧತೆ ನಡೆಸಿದೆ. ಶಾಲೆಗೆ ಹೋಗುವ 22 ಸಾವಿರ ಮಕ್ಕಳ ಪಾಲಕರಿಗೆ ವಿಮೆ ಮಾಡಿಸಲಾಗಿದೆ. ಇದರಿಂದಾಗಿ ರೋಟರಿ ಜಿಲ್ಲೆ 3180ರಲ್ಲಿ ಬೆಳ್ತಂಗಡಿಗೆ ಮೊದಲ ಸ್ಥಾನ. ಬೆಳ್ತಂಗಡಿಯ ಸಂತೆಕಟ್ಟೆ, ಲಾಯಿಲ, ಉಜಿರೆಯಲ್ಲಿ 6 ಲಕ್ಷ ರೂ.ನಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಿಸಲಾಗಿದೆ ಎಂದು ವಿವರಿಸುತ್ತಾರೆ ಉತ್ಸಾಹಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್. ರೈತ ಮಿತ್ರ ಯೋಜನೆಯಲ್ಲಿ ತಾಲೂಕಿನ ಕೃಷಿಕರಿಗೆ ವರದಾನವಾಗುವಂತೆ 4 ಲಕ್ಷ ರೂ. ಮೌಲ್ಯದ ಬಹೂಪಯೋಗಿ ಕೃಷಿ ಉಪಕರಣಗಳನ್ನು ವಿತರಿಸಲಾಗಿದೆ. ತಾಲೂಕಿನ ವಿವಿಧೆಡೆ ಸ್ವಉದ್ಯೋಗ ತರಬೇತಿ ಕಾರ್ಯಕ್ರಮ ನೀಡಲಾಗಿದೆ. ಪಲ್ಸ್ ಪೋಲಿಯೋ ಮೊದಲಾದ ವರ್ಷಂಪ್ರತಿ ನಡೆಯುವ ಕಾರ್ಯಕ್ರಮಗಳಲ್ಲಿ ಸಂಸ್ಥೆ ಅಗ್ರಣಿಯಾಗಿ ಸಾರಥ್ಯ ವಹಿಸಿದೆ. ಇದೀಗ ಸೌರಜ್ಯೋತಿ ಯೋಜನೆಯೆಡೆಗೆ ಕಾಲಿಟ್ಟಿದೆ.

ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಅತಿ ಹೆಚ್ಚು ಸೌರದೀಪ ಅಳವಡಿಸಿ ಕೀರ್ತಿಗೆ ಭಾಜನವಾದ ಸೆಲ್ಕೋ ಸಂಸ್ಥೆ ಎರಡು ಬಾರಿ ಪ್ರತಿಷ್ಠಿತ ಗ್ರೀನ್ ಆಸ್ಕರ್ ಪ್ರಶಸ್ತಿ ಪಡೆದಿದೆ. ಅಮೆರಿಕಾದ ಟೆಕ್ ಮ್ಯೂಸಿಯಂ ಪ್ರಶಸ್ತಿಯನ್ನೂ ಪಡೆದ ಹೆಗ್ಗಳಿಕೆ ಹೊಂದಿದೆ. ಇದೀಗ ಬೆಳ್ತಂಗಡಿಯಲ್ಲಿ ರೋಟರಿ ಸಹಯೋಗದಲ್ಲಿ ಸೌರಜ್ಯೋತಿ ಯೋಜನೆಗೆ ಮುಂದಾಗಿದ್ದು ಬ್ಯಾಂಕ್‌ಗಳ ಸಹಯೋಗದಲ್ಲಿ ಯೋಜನೆ ಅನುಷ್ಠಾನವಾಗುತ್ತಿದೆ. ಈಗಾಗಲೇ ನಿಡ್ಲೆ, ಕಳೆಂಜ, ಶಿಶಿಲದ 150 ಮನೆಗಳನ್ನು ಗುರುತಿಸಿ 60 ಮನೆಗಳಿಗೆ ಸೌರವಿದ್ಯುತ್ ಸಂಪರ್ಕ ನೀಡಲಾಗಿದೆ.

ಪಶ್ಚಿಮ ಘಟ್ಟದ ತಪ್ಪಲಿನ ಈ ಪ್ರದೇಶಗಳಿಗೆ ವಿದ್ಯುತ್ ಗಗನಕುಸುಮವಾಗಿದ್ದಾಗ ರೋಟರಿ ಈ ಯೋಜನೆ ಜಾರಿ ಮಾಡಿದೆ. ಇದರಲ್ಲಿ ರೋಟರಿ ಕ್ಲಬ್‌ನ ಉತ್ಸಾಹಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಕಾರ್ಯದರ್ಶಿ ಜಯರಾಮ್, ಸೌರಜ್ಯೋತಿ ಯೋಜನಾ ನಿರ್ದೇಶಕ ನಾರಾಯಣ ಭಿಡೆ, ಸೆಲ್ಕೋದ ಮೆನೇಜಿಂಗ್ ಡೈರೆಕ್ಟರ್ ಹರೀಶ್ ಹಂದೆ, ಸಿಂಡಿಕೇಟ್ ಬ್ಯಾಂಕ್, ಕನಾಟಕ ಗ್ರಾಮೀಣ ವಿಕಾಸ ಬ್ಯಾಂಕ್‌ನವರ ಪಾತ್ರ ಉಲ್ಲೇಖನೀಯ.